**<u>ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ 22.09.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು ಃ</u>**

**<u>ಮುಂದುವರೆದ ಪಾಟೀ ಸವಾಲು 1 ಮತ್ತು 2 ನೇ ಆರೋಪಿಗಳ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ</u>**

10. ನಾನು ಪಡುವಾರಹಳ್ಳಿಯಲ್ಲಿ ಹುಟ್ಟಿ ಬೆಳೆದಿದ್ದೇನೆ. ನನ್ನ ತಂದೆ ಸೇರಿದಂತೆ 5 ಜನ ಅಣ್ಣ ತಮ್ಮಂದಿರು. 1–ದೇವಣ್ಣ, 2–ಈಶ್ವರ (**PW**–4), 3–ನಾಗಣ್ಣ, 4–ಪ್ರಕಾಶ (ನನ್ನ ತಂದೆ **PW**–3), 5–ಕೃಷ್ಣ(ಮೃತ). ನನ್ನ ತಂದೆ ಅಣ್ಣ ತಮ್ಮಂದಿರು ಬೇರೆ ಬೇರೆ ವಾಸ ಇದ್ದೇವೆ. ನನ್ನ ತಂದೆಯ ಎಲ್ಲಾ ಅಣ್ಣ ತಮ್ಮಂದಿರ ನಡುವೆ ಸಾಮಾನ್ಯ ವಿಶ್ವಾಸ ಇತ್ತು. ಅಣ್ಣ ತಮ್ಮಂದಿರ ಮನೆಗಳಲ್ಲಿ ಕಾರ್ಯಕ್ರಮಗಳು ಇದ್ದಾಗ ಹೋಗಿ ಬರುವ ಕ್ರಮ ಇರಲಿಲ್ಲ. ಮೃತ ಕೃಷ್ಣನಿಗೆ ಅಣ್ಣನ ಮಕ್ಕಳು ಇದ್ದಾರೆ ಅವರ ಪೈಕಿ ನಾನು ಒಬ್ಬ ಇದ್ದೇನೆ. ನನ್ನ ಮತ್ತು ಕೃಷ್ಣ ಅವರ ನಡುವೆ ದ್ವೇಷ ಇರಲಿಲ್ಲ. ಮೃತ ಕೃಷ್ಣ ವಿದ್ಯುತ್ ಕೆಲಸವನ್ನು ಗುತ್ತಿಗೆ ತೆಗೆದುಕೊಂಡಿದ್ದು ನಾನು ಕೆಲಸಕ್ಕೆ ಹೋಗಿದ್ದೆ. ಅಂದು ನಾವು ಕೆಲಸ ಮಾಡುತ್ತಿದ್ದ ಮನೆಯ ಸಂಖ್ಯೆ ನೆನಪಿಲ್ಲ. ಗೊಕುಲಂ ನಲ್ಲಿ ಇರುವ ಪ್ರಕಾಶ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದೇವು. ಪ್ರಕಾಶ ಅವರ ತಂದೆಯ ಹೆಸರು ಮತ್ತು ಮನೆಯ ಪೂರ್ತಿ ವಿಳಾಸ ಗೊತ್ತಿಲ್ಲ. ಗೋಕುಲಂ ನಲ್ಲಿ ಸಾಕಷ್ಟು ಮನೆಗಳು ಇದೆ ಎಂದರೆ ಸರಿ.

11. ನಾನು ಚಿನ್ಮಯಿ ಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾಭ್ಯಾಸ ಮಾಡಿದ್ದೇನೆ. ಶಾಲೆಯ ಅವದಿಯಲ್ಲಿ ಮತ್ತು ನಂತರದಲ್ಲಿ ನಾನು ಸ್ವತಂತ್ರವಾಗಿ ಒಡಾಡಿಕೊಂಡು ಇದ್ದೆ ಎಂದರೆ ಸರಿಯಲ್ಲ. 7 ನೇ ತರಗತಿ ತನಕ ನನ್ನ ತಂದೆ ನನ್ನನ್ನು ಶಾಲೆಗೆ ಕರೆದುಕೊಂಡು ಹೋಗಿ ಬರುತ್ತಿದ್ದರು ನಂತರ ನಾನು ಸೈಕಲ್ ನಲ್ಲಿ ಶಾಲೆಗೆ ಹೋಗಿ ಬರತ್ತಿದ್ದೆ. ಒಂಟಿಕೊಪ್ಪಲಿನ ವೆಂಕಟರಮಣ ದೇವಸ್ಥಾನ ನೋಡಿದ್ದೇನೆ. ನಾನು

ಚಿಕ್ಕಂದಿನಿಂದ ಸದರಿ ದೇವಸ್ಥಾನಕ್ಕೆ ಹೋಗಿ ಬಂದಿದ್ದೇನೆ. ನಮ್ಮ ಮನೆಯಿಂದ ದೇವಸ್ಥಾನಕ್ಕೆ ಅಂದಾಜು 1 ಕಿ.ಮೀ ದೂರ ಇದೆ. ನಾನು ಹುಟ್ಟಿದಾಗಿನಿಂದ ಸುಮಾರು 10 ಸಲ ದೇವಸ್ಥಾನಕ್ಕೆ ಹೋಗಿ ಬಂದಿದ್ದೇನೆ. ದೇವಸ್ಥಾನಕ್ಕೆ ಹತ್ತಿರದಲ್ಲಿ ಸರ್ಕಲ್ ಇದೆ ಎಂದರೆ ಸರಿಯಲ್ಲ. ದೇವಸ್ಥಾನಕ್ಕೆ ಹತ್ತಿರದಲ್ಲಿ ರಾಮಕೃಷ್ಣ ಆಶ್ರಮ ಶಾಲೆ ಇದೆ ಎಂದರೆ ನೋಡಿಲ್ಲ. ದೇವಸ್ಥಾನಕ್ಕೆ ಹತ್ತಿರದಲ್ಲಿ ವಿ.ವಿ.ಪುರಂ ಪೋಲೀಸ್ ಠಾಣೆ ಇದೆ ಎಂದರೆ ಸರಿ. ದೇವಸ್ಥಾನದಿಂದ ವಿ.ವಿ.ಪುರಂ ಪೋಲೀಸ್ ಠಾಣೆಗೆ ಅಂದಾಜು 100 ಮೀ ದೂರ ಇದೆ.

12. ಕೃಷ್ಣನಿಗೆ ಘಟನೆ ಸ್ಥಳದಲ್ಲಿ ರಕ್ತಸ್ರಾವ ಆಗುತ್ತಿತ್ತು ನಾನು ಅಪೋಲೊ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. ನಾನು ಕೃಷ್ಣನನ್ನು ಮಾರುತಿ ಒಮಿನಿ ವಾಹನಕ್ಕೆ ಹಾಕುವಾಗ ನನ್ನ ಕೈಗೆ ಮತ್ತು ಕಾಲಿಗೆ ರಕ್ತ ತಾಗಿತ್ತು. ನನ್ನ ಬಟ್ಟೆಗೆ ರಕ್ತದ ಕಲೆಗಳು ಆಗಿರಲಿಲ್ಲ. ನಾನು ಮತ್ತು ನನ್ನ ದೂರದ ಸಂಬಂಧಿ ವಿಶ್ವನಾಥ ಕೃಷ್ಣನನ್ನು ಮಾರುತಿ ಒಮಿನಿ ವಾಹನಕ್ಕೆ ಹಾಕಿದ್ದೇವೆ. ಕೃಷ್ಣ ದೇಹದಲ್ಲಿ ನನಗಿಂತ ದಪ್ಪ ಇದ್ದರು ಎಂದರೆ ಸರಿ. ನಾನು ಗುರುತಿಸಿದ ಚಪ್ಪಲಿ ನನಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ಅಂದು ನಾನು ಸ್ಥಳದಲ್ಲಿ ಇರಲಿಲ್ಲ, ಕೃಷ್ಣನ ದೇಹವನ್ನು ಮುಟ್ಟಿಲ್ಲ ಮತ್ತು ಅದೇ ಕಾರಣ ನನ್ನ ಬಟ್ಟೆಗಳಿಗೆ ರಕ್ತದ ಕಲೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಅರ್ಧ ಗಂಟೆ ಕಾಲ ಮಾತ್ರ ಆಸ್ಪತ್ರೆಯಲ್ಲಿ ಇದ್ದು ನಂತರ ಮನೆಗೆ ಬಂದಿದ್ದೇನೆ. ಬೆಳಗ್ಗೆ 11.00 ರ ವೇಳೆಗೆ ನಾನು ಆಸ್ಪತ್ರೆಯನ್ನು ಬಿಟ್ಟಿದ್ದೇನೆ. ನಾನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ 10.10–10.20 ಆಗಿತ್ತು.

13. ನಮ್ಮ ಮನೆಯಲ್ಲಿ ನನ್ನ ತಂದೆ, ತಾಯಿ ಮತ್ತು ತಂಗಿ ಇದ್ದೇವೆ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಹೇಳಿದ ದಿನಾಂಕಃ25.12.2016 ದ ವರೆಗು ಘಟನೆ ಬಗ್ಗೆ ನಾನು ಬೇರೆಯವರ ಹತ್ತಿರ ಹೇಳಿಲ್ಲ. ದಿಃ 23.12.2016 ಮತ್ತು 24.12.2016 ರ ತನಕ ನಾನು ವಿ.ವಿ.ಪುರಂ ಪೊಲೀಸ್ ಠಾಣೆಗೆ ಹೋಗಿ ಹೇಳಿಕೆ ಕೊಡುವ ಪ್ರಯತ್ನ ಮಾಡಿಲ್ಲ. ಘಟನೆಗೆ ಮೊದಲು ಮತ್ತು ದಿಃ 25.12.2016 ರ ಮೊದಲು ನಾನು ವಿ.ವಿ.ಪುರಂ ಪೊಲೀಸ್ ಠಾಣೆಗೆ ಹೋಗಿಲ್ಲ. ವಿ.ವಿ.ಪುರಂ ಪೊಲೀಸ್ ಠಾಣೆಯಲ್ಲಿ ನನ್ನ ಪರಿಚಯದ ವ್ಯಕ್ತಿಗಳು ಇಲ್ಲ ಅದೇ ಕಾರಣ ವಿ.ವಿ.ಪುರಂ ಪೊಲೀಸ್ ಠಾಣೆಯ

ಅಧಿಕಾರಿಗಳಿಗೆ ನನ್ನ ಪರಿಚಯ ಇಲ್ಲ. ದಿಃ 25.12.2016 ರಂದು ಬೆಳಗಿನ ವೇಳೆ ಪೊಲೀಸ್ ಸಿಬ್ಬಂದಿ ನನಗೆ ಘಟನೆಯ ಬಗ್ಗೆ ವಿಚಾರಿಸಿ ಪೊಲೀಸ್ ಠಾಣೆಗೆ ಬರುವಂತೆ ಹೇಳಿದ್ದರು ಲಿಖಿತ ನೋಟೀಸ್ ಕೊಟ್ಟಿರಲಿಲ್ಲ. ದಿಃ 25.12.2016 ರಂದು ನನಗೆ ಪೊಲೀಸ್ ಠಾಣೆಗೆ ಬರುವಂತೆ ಮಾಹಿತಿ ಕೊಟ್ಟಿರಲಿಲ್ಲ, ನಾನು ಪೊಲೀಸ್ ಠಾಣೆಗೆ ಭೇಟಿ ಕೊಟ್ಟಿಲ್ಲ ಮತ್ತು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ ಹೇಳಿಕೆಯನ್ನು ಪೊಲೀಸ್ ಸಿಬ್ಬಂದಿ ಕೈಯಲ್ಲಿ ಬರೆದುಕೊಂಡಿದ್ದಾರೆ. **Inspector** ಇದ್ದರು **Constable** ಬರೆದುಕೊಂಡಿದ್ದಾರೆ.

14. ಹೇಳಲಾದ ಘಟನೆ ಆದ 2–3 ತಿಂಗಳ ನಂತರ ದೋ.ಪಟ್ಟಿ ಸಲ್ಲಿಸುವ ಮೊದಲು ಅವ್ವ ಮಾದೇಶ ಮತ್ತು ಅವರ ಗುಂಪಿನ ಒತ್ತಡದ ಮೇರೆಗೆ ಹಳೆಯ ದಿನಾಂಕಕ್ಕೆ ನನ್ನ ಹೇಳಿಕೆಯನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ನೀಡಿದ ಹೇಳಿಕೆಗೆ ನಾನು ಸಹಿ ಮಾಡಿದ್ದೇನೆ. ನಾನು ವಿಷಯ ತಿಳಿದು ನಂತರ ಆಸ್ಪತ್ರೆಗೆ ಹೋಗಿದ್ದೇನೆ ಎಂದರೆ ಸರಿಯಲ್ಲ. ಅಪೊಲೋ ಆಸ್ಪತ್ರೆಯಿಂದ ಕೆ.ಆರ್.ಆಸ್ಪತ್ರೆಗೆ ಕೃಷ್ಣನನ್ನು ಕರೆದುಕೊಂಡು ಹೋಗುವಾಗ ನಾನು ಜೊತೆಯಲ್ಲಿ ಇದ್ದೆ ಎಂದರೆ ಸರಿಯಲ್ಲ. ಕೆ.ಆರ್.ಆಸ್ಪತ್ರೆಯಲ್ಲಿ ಶವ ಪಂಚನಾಮೆ ಕಾಲಕ್ಕೆ ನಾನು ಹಾಜರು ಇದ್ದೆ ಮತ್ತು ಘಟನೆ ಬಗ್ಗೆ ನನಗೆ ಮಾಹಿತಿ ಇಲ್ಲದೇ ಕಾರಣ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು, ವಿನಯ್ ಕುಮಾರ ಮತ್ತು ಮನೋಹರ ಅವ್ವ ಮಾದೇಶ ಅವರ ಗುಂಪಿನವರು ಮತ್ತು ಜೊತೆಯವರು ಹಾಗೂ ಬೇರೆ ಏನು ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ.

15. "ಹೋಂಡಾ ಆಕ್ಟಿವಾ ವಾಹನದಲ್ಲಿ ಹೋಗುವಾಗ ಟೆಂಪಲ್ ರಸ್ತೆಯಿಂದ ಪೋಸ್ಟ್ ಅಫೀಸ್ ರಸ್ತೆಗೆ ಎಡಕ್ಕೆ ತಿರುಗಿದಾಗ ಪೋಸ್ಟ್ ಅಫೀಸ್ ಕಾಂಪೌಂಡ್ ಪಕ್ಕದಲ್ಲಿ ಸಿಲ್ವರ್ ಬಣ್ಣದ ಸ್ಯಾಂಟ್ರೋ ಕಾರು ನಿಂತಿತ್ತು ಎಂದು ಪೊಲೀಸರ ಸಮಕ್ಷಮ ಮತ್ತು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ". ಬೆಳಗ್ಗೆ 10.00 ರಿಂದ 10.30 ರ ವೇಳೆಯಲ್ಲಿ ಒಂಟಿಕೊಪ್ಪಲಿನ ಕೆ.ಡಿ. ರಸ್ತೆಗೆ ಟೇಪು ತೆಗೆದುಕೊಂಡು ಹೋಗಲು ಬಂದಿದ್ದು, ಹೈವೇ 18 ಹೋಟೇಲ್ ಬಳಿ ಬಂದಾಗ ಅಲ್ಲಿ ಒಂದು ಶಬ್ದ ಕೇಳಿ ಬಂತು ಆಗ ಕಾರಿನ ಪಕ್ಕದಲ್ಲಿ

ಇದ್ದ 5 ಜನ ವ್ಯಕ್ತಿಗಳು ಯಾವುದೋ ವ್ಯಕ್ತಿಗೆ ಮಚ್ಚಿನಿಂದ ಹಲ್ಲೆ ಮಾಡುತ್ತಿದ್ದರು. ನಾನು ನನ್ನ ವಾಹನದಲ್ಲಿ ನಿಧಾನವಾಗಿ ಹೋಗುತ್ತಿದ್ದಾಗ ಸದರಿ ವ್ಯಕ್ತಿಗಳು ಹಲ್ಲೆಗೆ ಒಳಪಟ್ಟ ವ್ಯಕ್ತಿಯನ್ನು ಎತ್ತಿಕೊಂಡು ಕಾರಿನಲ್ಲಿ ಹೈವೇ18 ಹೋಟೇಲ್ ಕಡೆಗೆ ಹೋಗುತ್ತಿದ್ದ ಬಗ್ಗೆ ಪೊಲೀಸರ ಸಮಕ್ಷಮ ಮತ್ತು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟ ಬಗ್ಗೆ ಪ್ರಶ್ನಿಸಲಾಗಿ ಸಾಕ್ಷಿದಾರರು ಕೃಷ್ಣನನ್ನು ನಾನು ಮಾರುತಿ ಒಮಿನಿ ವಾಹನದಲ್ಲಿ ಕರೆದುಕೊಂಡು ಹೋಗಿರುವುದಾಗಿ ಸ್ವತಃ ನುಡಿಯುತ್ತಾರೆ.

16. "ಹಲ್ಲೆಗೆ ಒಳಪಟ್ಟ ವ್ಯಕ್ತಿಯನ್ನು ನೋಡಲು ನಾನು ಪೋಸ್ಟ್ ಅಫೀಸ್ ರಸ್ತೆಗೆ ಹೋದಾಗ ಹಲ್ಲೆಗೆ ಒಳಗಾದ ವ್ಯಕ್ತಿ ನನ್ನ ಚಿಕ್ಕಪ್ಪ ಕೃಷ್ಣ ಆಗಿದ್ದರು. ನಮ್ಮ ಚಿಕ್ಕಪ್ಪನನ್ನು ನೋಡಲಾಗಿ ಅವರ ತಲೆಗೆ ಏಟಾಗಿದ್ದು ನಾನು ಜೋರಾಗಿ ಕೂಗಿಕೊಂಡು ಕಾಂಪೌಂಡ್ ಪಕ್ಕದ ಮನೆಯ ಒಬ್ಬ ಪುರುಷ ವ್ಯಕ್ತಿ ಮನೆಯಿಂದ ಹೊರಗೆ ಬಂದಾಗ ಅವರಿಗೆ ನೀರು ಕೊಡುವಂತೆ ಕೇಳಿದಾಗ ಅದೇ ವೇಳೆ ನನ್ನ ದೂರದ ಸಂಬಂದಿ ಶ್ರೀ ವಿಶ್ವನಾಥ ಅವರು ಸ್ಥಳಕ್ಕೆ ಬಂದಿದ್ದು, ನಾವುಗಳು ನಮ್ಮ ಚಿಕ್ಕಪ್ಪನನ್ನು ತಕ್ಷಣ ಅಪೋಲೋ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಮ್ಮ ಅತ್ತೆಯ ಮಗ ಕಾಂತ ಅವರಿಗೆ ಫೋನ್ ಮಾಡಿ ವಿಚಾರ ತಿಳಿಸಿದೆನು" ಎಂದು ಪೊಲೀಸರ ಸಮಕ್ಷಮ ಮತ್ತು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ.

17. " ದಿಃ 25.12.2016 ರಂದು ಪೊಲೀಸರು ನನ್ನ ಮನೆಗೆ ಬಂದು ನನ್ನನ್ನು ಪೊಲೀಸ್ ಠಾಣೆಗೆ ಬರುವಂತೆ ಹೇಳಿದ ಮೇರೆಗೆ ನಾನು ಪೊಲೀಸ್ ಠಾಣೆಗೆ ಹೋದಾಗ ತನಿಖಾಧಿಕಾರಿಯವರು ನನಗೆ ಘಟನೆಯನ್ನು ನೋಡಿದ ಬಗ್ಗೆ ವಿಚಾರಿಸಲಾಗಿ ನಾನು ನಡೆದ ಘಟನೆಯನ್ನು ವಿವರಿಸಿದ್ದೇನೆ" ಎಂದು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ.

18 "ದಿಃ 23.12.2016 ರಂದು ನಾನು ಘಟನೆ ನಡೆದ ಸ್ಥಳಕ್ಕೆ ಹೋಗಿ ನೋಡಲಾಗಿ ಕಪ್ಪು ಬಣ್ಣದ 1 ಹೆಲ್ಮೆಟ್ 3 ಚಪ್ಪಲಿಗಳು ಹಾಗೂ ನನ್ನ 2 ಚಪ್ಪಲಿಗೆ ರಕ್ತದ ಕಲೆಯಾಗಿದ್ದು ಅವುಗಳನ್ನು ಸ್ಥಳದಲ್ಲಿ ಬಿಟ್ಟಿದ್ದು ನೋಡಿದ್ದೇನೆ ಹಾಗೂ ರಕ್ತದ ಕಲೆಯಾದ ಒಂದು ಮಚ್ಚು ಅದರ ಹಿಡಿ ಕಟ್ ಆಗಿತ್ತು. ಜಲ್ಲಿಯ ಮೇಲೆ ಬಿಳಿ ಬಣ್ಣದ ಹೋಂಡಾ ಆಕ್ಟೀವಾ ದ್ವಿಚಕ್ರ ವಾಹನ ಬಿದ್ದಿತ್ತು ಎಂದು ಪೊಲೀಸರ ಸಮಕ್ಷಮ ಮತ್ತು

ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ.  ನನಗೆ ಈಗ ಸೂಚಿಸಿದಂತೆ ಈ ಮೇಲಿನಂತೆ ಹೇಳಿಕೆಯನ್ನು ನಾನು ಪೊಲೀಸರ ಸಮಕ್ಷಮ ಮತ್ತು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.  ನನಗೆ ಸೇರಿದ ಒಂದು ಚಪ್ಪಲಿ ಸ್ಥಳದಲ್ಲಿ ಬಿದ್ದಿತ್ತು ಮತ್ತು ಮತ್ತೊಂದು ಚಪ್ಪಲಿ ನನ್ನ ಕಾಲಿಗೆ ಇತ್ತು ಆದರೆ ಗಾಬರಿಯಲ್ಲಿ ಯಾವ ಕಾಲಿನ ಚಪ್ಪಲಿ ನನ್ನ ಬಳಿ ಇತ್ತು ಎಂದು ಗೊತ್ತಿಲ್ಲ.  ಸ್ಥಳದಲ್ಲಿ ನನಗೆ ಸೇರಿದ ಯಾವುದೇ ಚಪ್ಪಲಿ ಬಿದ್ದಿರಲಿಲ್ಲ ಮತ್ತು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

19. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.  ಹಲ್ಲೆಗೆ ಒಳಪಟ್ಟ ವ್ಯಕ್ತಿಯನ್ನು ಸ್ಥಳದಲ್ಲಿ ಬಿಟ್ಟು ಹಲ್ಲೆ ಮಾಡಿದ ವ್ಯಕ್ತಿಗಳು ಕಾರಿನಲ್ಲಿ ಹೋದ ಬಗ್ಗೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಮತ್ತೊಂದು ಚಪ್ಪಲಿಯನ್ನು ನನ್ನ ಮನೆಯಲ್ಲಿ ಇಟ್ಟಿದ್ದು ಅದನ್ನು ಮನೆಯವರು ಬಿಸಾಕಿದ್ದಾರೆ. ಚಪ್ಪಲಿ ವಿಷಯದಲ್ಲಿ ನಾನು ಈ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರ ಸರಿಯಲ್ಲ.  ದಿಃ 23.12.2016 ರಂದು ನಾನು ಕೆ.ಆರ್.ಆಸ್ಪತ್ರೆಗೆ ಹೋದಾಗ ಮಾತ್ರ ನನಗೆ ಘಟನೆ ಬಗ್ಗೆ ತಿಳಿದಿದೆ ಎಂದರೆ ಸರಿಯಲ್ಲ.  ಕೃಷ್ಣನಿಗೆ ಮಚ್ಚಿನ ಏಟು ಆಗಿರಲಿಲ್ಲ ಮತ್ತು ಮಚ್ಚಿನ ಏಟು ಆಗಿತ್ತು ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರ ಸರಿಯಲ್ಲ.  ನಾನು ಮತ್ತು ಅವ್ವ ಮಾದೇಶ ಅವರ ಗುಂಪಿನವರು ಸೇರಿ ಪ್ರಕರಣವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ.

20. ನನಗೆ ತೋರಿಸಲಾದ 3 ಫೋಟೋಗಳಲ್ಲಿ ನಾನು ಇದ್ದೇನೆ ಎಂದರೆ ಸರಿಯಲ್ಲ.  ಸದರಿ 3 ಫೋಟೋಗಳಲ್ಲಿ ಅವ್ವ ಮಾದೇಶ ಅವರ ಗುಂಪಿನವರು, ಅವರ ಕುಟುಂಬದವರು ಮತ್ತು ಅವ್ವ ಮಾದೇಶ ಇದ್ದಾರೆ ಎಂದರೆ ಸರಿಯಲ್ಲ.  ಸದರಿ ಫೋಟೋದಲ್ಲಿ ತೋರಿಸಿದ ವ್ಯಕ್ತಿ ಯಾರು ಎಂದು ಗೊತ್ತಿಲ್ಲ. ಒಂದು ಫೋಟೋದಲ್ಲಿ ಮೃತ ಕೃಷ್ಣ ಕಂಡು ಬರುತ್ತಾರೆ ಎಂದು ಗೊತ್ತಿಲ್ಲ.  **(ಸಾಕ್ಷಿದಾರರಿಗೆ ತೋರಿಸಿದ 3 ಫೋಟೋಗಳ ಬಗ್ಗೆ ಸಾಕ್ಷಿದಾರರು ಒಪ್ಪಿಕೊಂಡಿಲ್ಲ ಆದರೆ ಪ್ರಕರಣ ಸಲುವಾಗಿ ಮತ್ತು ಗುರುತಿನ ಸಲುವಾಗಿ ಮಾತ್ರ ಕ್ರಮ ಸಂಖ್ಯೆ 1 ರಿಂದ 3 ಎಂದು ಸಂಖ್ಯೆಗಳನ್ನು ನೀಡಲಾಗಿದೆ.)**  ಫೋಟೋಗಳಲ್ಲಿ ನಾನು ಮತ್ತು

ಕಂಡು ಬರುವ ಇತರೆ ವ್ಯಕ್ತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**